2001-2002

1. ಜಾಮಿಯಾ ಮಸೀದಿ ಮತ್ತು ಮದ್ರಸಾ ಬಂಡಿಗನಳ್ಳ, ನಾಗಮಂಗಲ - ರೂ.25,000
2. ಖಬ್ರಸ್ತಾನ್, ಒಳಪೇರೆಪುರ, ನಾಗಮಂಗಲ ತಾಲ್ಲೂಕು- ರೂ.25,000
3. ಮದೀನಾ ಮಸೀದಿ, ನಾಗಮಂಗಲ ತಾಲ್ಲೂಕು- ರೂ. 40,000

ಆ. ಇಲ್ಲ

ಇ. ಉದ್ಭವಿಸುವುದಿಲ್ಲ

ನಾಗಮಂಗಲ ತಾಲ್ಲೂಕಿನಲ್ಲಿ ಖಾಲಿ ಇರುವ ಪಶುವೈದ್ಯರ ನೇಮಕಾತಿ

375(508) ಶ್ರೀ ಚಲುವರಾಯ ಸ್ವಾಮಿ ಎನ್.(ನಾಗಮಂಗಲ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ನಾಗಮಂಗಲ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಹರದನಹಳ್ಳಿ ಗ್ರಾಮದಲ್ಲಿರುವ ಪಶು ಸಂಗೋಪನಾ ಆಸ್ಪತ್ರೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಯನ್ನು ಭರ್ತಿ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಅ. ಪಶುವೈದ್ಯರನ್ನು ನೇಮಕಾತಿ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಕೊರಟಗೆರೆ ತಾಲ್ಲೂಕಿನಲ್ಲಿ ಮಸೀದಿಗಳಿಗೆ ವಕ್ಫ್ ಮಂಡಳಿಯಿಂದ ಅನುದಾನ

376(467) ಶ್ರೀ ಚಿನ್ನಿಗಪ್ಪ.ಸಿ (ಕೊರಟಗೆರೆ): ಮಾನ್ಯ ಅಲ್ಪಸಂಖ್ಯಾಂತರ ಕಲ್ಯಾಣ ಮತ್ತು ವಕ್ಫ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ಮುಸ್ಲಿಂ ಬಾಂಧವರ ಮಸೀದಿಗಳ ಸಂಖ್ಯೆ ಎಷ್ಟು?

ಆ. ಈ ಮಸೀದಿಗಳ ಜೀರ್ಣೋದ್ಧಾರದ ಕಟ್ಟಡ ಹಾಗೂ ಕಾಂಪೌಂಡ್ ಗೋಡೆ ನಿರ್ಮಿಸಲು ವಕ್ಫ್ ಮಂಡಳಿಯ ವತಿಯಿಂದ ಇದುವರೆವಿಗೂ ಬಿಡುಗಡೆಯಾದ ಮೊತ್ತವೆಷ್ಟು?

ಇ. ವಕ್ಫ ಮಂಡಳಿಯ ವತಿಯಿಂದ ಬಿಡುಗಡೆ ಯಾದ ಮೊತ್ತದಲ್ಲಿ ಯಾವ ಯಾವ ಮಸೀದಿಗಳನ್ನು ದುರಸ್ತೆಗೊಳಿಸಲಾಗಿದೆ; ಇದಕ್ಕೆ ತಗಲಿರುವ ಅಂದಾಜು ವೆಚ್ಚ ಎಷ್ಟು? ವಿವರ ನೀಡುವುದು?

ಈ. ಇನ್ನೂ ದುರಸ್ತಿಗೊಳ್ಳದೇ ಬಾಕಿ ಉಳಿದಿರುವ ಮಸೀದಿ ಹಾಗೂ ಜಮ್ಮಾಮಸೀದಿಗಳ ಸಂಖ್ಯೆ ಎಷ್ಟು; ವಿವರ ಒದಿಗಿಸುವುದು

ಉ. ದುರಸ್ತಿಗೊಳ್ಳದೇ ಬಾಕಿ ಉಳಿದಿರುವ ಮಸೀದಿಗಳ ಜೀರ್ಣೋದ್ಧಾರ ಕಾರ್ಯಕ್ಕೆ ವಕ್ಫ್ ಮಂಡಳಿಯಿಂದ ಹಣ ಬಿಡುಗಡೆ ಮಾಡಿ ದುರಸ್ತಿಗೊಳಿಸಿ ಈ ಭಾಗದ ಮುಸ್ಲಿಂ ಬಾಂಧವರಿಗೆ ಪ್ರಾರ್ಥನೆ ಹಾಗೂ ಇತರೆ ಕಾರ್ಯಗಳಿಗೆ ಅನುಕೂಲ ಮಾಡಿಕೊಡುವುದು ಯಾವಾಗ;

ಊ. ಕೊರಟಗೆರೆ ಕ್ಷೇತ್ರದ ಎಷ್ಟು ಖಬರಸ್ತಾನ್‌ಗಳಿಗೆ ವಕ್ಫ್ ಮಂಡಳಿಯಿಂದ ಅನುದಾನ ಬಿಡುಗಡೆ ಮಾಡಲಾಗಿದೆ; ಈಗಾಗಲೇ ದುರಸ್ತಿಗೊಂಡ ಖಬರಸ್ತಾನಗಳ ಸಂಖ್ಯೆ ಎಷ್ಟು? (ವಿವರ ಒದಗಿಸುವುದು)